**<u>ದಿನಾಂಕಃ 18-06-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ.ಸಿ.ಎಸ್. ವಕೀಲರಿಂದಃ</u>**

ಸದರಿ ಅಪಘಾತ ನಡೆಯಿತು ಎನ್ನಲಾದ ದಿನ ನನ್ನ ಗಂಡ ಹನುಮಂತಪ್ಪ ಬ್ಯಾಡಗಿ ಯಿಂದ ಕದರಮಂಡಲಗಿಗೆ ಹೊರಟಿದ್ದರು. ಸದರಿ ದಿನ ನನ್ನ ಗಂಡ ಬೈಕ್ ಮೇಲೆ ಹೊರಟಿದ್ದರು. ಸದರಿ ಬೈಕ್ ಸುರೇಶ ಎಂಬುವವರಿಗೆ ಸೇರಿದ್ದು ಅವರ ಪೂರ್ತಿ ಹೆಸರು ನನಗೆ ಗೊತ್ತಿಲ್ಲ. ಸದರಿ ಬೈಕನ್ನು ಸದರಿ ದಿನ ಸದರಿ ಸುರೇಶರವರೇ ಚಾಲನೆ ಮಾಡುತ್ತಿದ್ದರು. ಸದರಿ ಅಪಘಾತ **2** ಬೈಕಗಳ ಮಧ್ಯೆ ಆಗಿತ್ತು. ಸದರಿ ನನ್ನ ಗಂಡ ಹೊರಟಿದ್ದ ಬೈಕ್ ಸವಾರ ಸುರೇಶ ರವರಿಗೆ ಚಾಲನಾ ಪರವಾನಿಗೆ ಪತ್ರ ಇತ್ತು. ಸದರಿ ಅಪಘಾತದ ಬಗ್ಗ ಊರಿನ ಜನ ನನಗೆ ಹೇಳಿದ್ದರಿಂದ ನನಗೆ ಗೊತ್ತಾಯಿತು.

**02.** ಸದರಿ ಅಪಘಾತವಾದ ನಂತರ ನಾನು ಬ್ಯಾಡಗಿಯ ಸರ್ಕಾರಿ ಆಸ್ಪತ್ರೆಗೆ ಹೋದೆ. ಸದರಿ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗೆ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಯಿತು. ನಂತರ ಸದರಿ ಜಿಲ್ಲಾ ಆಸ್ಪತ್ರೆಯಿಂದ ತಕ್ಷಣ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಲಾಯಿತು. ಸದರಿ ಕಿಮ್ಸ ಆಸ್ಪತ್ರೆಯಲ್ಲಿ **2** ತಿಂಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆಯಲಾಯಿತು. ಸದರಿ ಆಸ್ಪತ್ರೆಯಿಂದ ನನ್ನ ಗಂಡ ಗುಣಮುಖನಾಗಿ ಬಿಡುಗಡೆಯಾದರು ಎಂದರೆ ಸಾಕ್ಷಿ ಕಾಲು ನೋವು ಬಹಳ ಇತ್ತು ಎನ್ನುತ್ತಾರೆ. ಸದರಿ ಕಿಮ್ಸ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ನನ್ನ ಗಂಡ ರಾಣೇಬೆನ್ನೂರಿನ ಓಂ ಆಸ್ಪತ್ರೆಯಲ್ಲಿ ಮುಂದುವರೆದ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಸದರಿ ರಾಣೇಬೆನ್ನೂರಿನ ಓಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ಒದಗಿಸಲಾಗಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ.

**03.** ಸದರಿ ಕಿಮ್ಸ ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ **10** ದಿನಗಳ ನಂತರ ರಾಣೇಬೆನ್ನೂರಿನ ಓಂ ಆಸ್ಪತ್ರೆಗೆ ಚಿಕಿತ್ಸೆ ಪಡೆಯಲು ಹೋಗಿದ್ದೆವು. ಸದರಿ ರಾಣೇಬೆನ್ನೂರಿನ ಓಂ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರಲಿಲ್ಲ

ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದೆವು. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲೆಗಳು ನಮ್ಮ ಮನೆ ಮಳೆಯಿಂದ ಬಿದ್ದ ಕಾಲಕ್ಕೆ ಹಾಳಾಗಿರುತ್ತವೆ. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ **2** ಲಕ್ಷ ರೂಪಾಯಿ ಖರ್ಚು ಮಾಡಿದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ **2** ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**04.** ಸದರಿ ನನ್ನ ಗಂಡ ಹನುಮಂತಪ್ಪ ತೀರಿಕೊಂಡು **5** ವರ್ಷಗಳು ಕಳೆದಿವೆ. ಸದರಿ ನನ್ನ ಗಂಡ ಅಪಘಾತದಲ್ಲಿ ಆದ ಕಾಲು ನೋವಿನಿಂದ ತೀರಿಕೊಂಡರು. ಸದರಿ ನನ್ನ ಗಂಡ ತೀರಿಕೊಂಡಿದ್ದಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿತ್ತು ಎಂದರೆ ಸರಿ. ನಾನು ಹಾಜರು ಪಡಿಸಿದ ದಾಖಲೆಗಳ ಪ್ರಕಾರ ನನ್ನ ಗಂಡ ವಿಷ ಸೇವಿಸಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನನ್ನ ಗಂಡ ತೀರಿಕೊಂಡಿದ್ದಕ್ಕೆ ಸಂಬಂಧಿಸಿದಂತೆ ಬ್ಯಾಡಗಿ ಪೋಲಿಸ್ ಠಾಣೆಯಲ್ಲಿ ಯು.ಡಿ.ಆರ್. ಪ್ರಕರಣ ಸಂಖ್ಯೆ: **24/2021** ದಾಖಲಾಗಿದ್ದು ಸದರಿ ತನಿಖೆ ಕಾಲಕ್ಕೆ ವೈದ್ಯರು ಸದರಿ ನನ್ನ ಗಂಡ ವಿಷ ಪ್ರಾಶಾಣದಿಂದ ತೀರಿಕೊಂಡಿರುತ್ತಾರೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ. ಆದರೂ ಸಹ ನನ್ನ ಗಂಡ ಅಪಘಾತದಲ್ಲಿ ಗಾಯಗೊಂಡು ತೀರಿಕೊಂಡಿರುತ್ತಾರೆ ಎಂದು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತ ಆಗಿ **3** ವರ್ಷಗಳ ನಂತರ ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಅಪಘಾತವಾದ ಸಮಯದಲ್ಲಿ ಆತ ತೀರಿಕೊಳ್ಳುವ ವರೆಗಿನ ಚಿಕಿತ್ಸೆಯ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸದರಿ ದಾಖಲೆಗಳು ಹಾಳಾಗಿವೆ ಎನ್ನುತ್ತಾರೆ. ಸದರಿ ದಾಖಲೆಗಳ ದ್ವಿಪ್ರತಿಯನ್ನು ತಂದು ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

**05.** ನನ್ನ ಗಂಡ ಶೇತ್ಕಿ ಹಾಗೂ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ತಿಂಗಳಿಗೆ ರೂ.**20,000/-** ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸುವ

ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ಗಂಡನ ಸಾವಿಗೂ ಹಾಗೂ ಆತನಿಗೆ **2018** ರಲ್ಲಿ ಆದ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. **2** ನೇ ಎದುರುದಾರರು ನಾವು ಕೇಳಿರುವ ಪರಿಹಾರ ನೀಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ಸದರಿ ನನ್ನ ಗಂಡ ಆತ ಜೀವಂತ ಇರುವಾಗ ಕೇಳಿರುವ ರೂ.**17,00,000/-** ಪರಿಹಾರವನ್ನು ಸಹ ತಪ್ಪಾಗಿ ಲೆಕ್ಕ ಮಾಡಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ತಿಂಗಳಿಗೆ ರೂ.**20,000/-** ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡದೇ ಮದ್ಯೆಪಾನ ಮಾಡಿ ಓಡಾಡುತ್ತಿದ್ದರು ಎಂದರೆ ಸರಿಯಲ್ಲ. ನಾವು ನನ್ನ ಗಂಡನ ಅವಲಂಬಿತರಾಗಿದ್ದರಿಂದ ನಾವು ಕೇಳಿರುವ ಪರಿಹಾರ ಪಡೆಯಲು ಅರ್ಹರು ಎಂದು ಸುಳ್ಳು ಬರೆಯಿಸಿರುತ್ತೇವೆ ಎಂದರೆ ಸರಿಯಲ್ಲ.

**06.** ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿದ ವೈದ್ಯಕೀಯ ದಾಖಲೆಗಳು ನಿಜ ಇರುತ್ತವೆ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.